## ಪದಬಂಧ



ಎಡದಿಂದ ಬಲಕ್ಕೆ:

1. ಅವರು ಸಭ್ಯರಾಗುವ ಸಾಧ್ಯತೆ ಕಿಂಚಿತ್ತೂ ಇಲ್ಲ (4)
3. ಬಿರುಸಿನ ಮಾತುಕತೆ ನಡುವೆ ಹಿತಕರ ಪರಿಮಳ ಉಂಟೇ? (3)
4. ಮನವನ್ನು ಗೆಲ್ಲುವ ದಾರಿ ತೋರಿದವರಿಗೆ ನಮಸ್ಕಾರ (3)
6. ಅತಿಯಾಸೆ ಇಲ್ಲದ್ದೇ ಹೆಚ್ಚುಗಾರಿಕೆ (4)
7. ತಗ್ಗು ದಾಟುತ್ತಿರುವಾಗಲೇ ತಟ್ಟನೆ ಮೇಲೇರುವ ಮಾರ್ಗ (4)
9. ಶ್ಯಾಮನ ಮಾತಿನಂತೆ ಈಗ ನೂರು ವರ್ಷ (4)
12. ಅಪಾಯ ಬೇಡವೆಂದರೆ ಭದ್ರವಿರಲಿ ತಳದ ಕಟ್ಟಡ (4)
14. ಸರಸರನೆ ಮಾತಾಡಲು ತಕ್ಕ ನಾಲಿಗೆ ಹೇಗೆ? (3)
15. ವಾರಾಂತ್ಯದಲ್ಲಿ ಲಭಿಸಿದ್ದು ಬಿಳೀ ಲೋಹ (3)
16. ತರಗು ತರುವ ಹೊಣೆ ತುಂಬ ದೊಡ್ಡದು (4)

ಮೇಲಿಂದ ಕೆಳಕ್ಕೆ:

1. ಆ ಪ್ರಯತ್ನ ಬಿಟ್ಟುಬಿಡುವ ಬಗೆಗೆ ನಿಮ್ಮ ಆಲೋಚನೆ ಏನು? (4)
2. ವನ ರಕ್ಷಣೆಗೆ ಸ್ಫೂರ್ತಿ ನೀಡಿದ್ದು ಗಿಡಮೂಲಿಕೆ ಹೌದೇ? (4)
3. ಸಮಸ್ತರಿಗೂ ಬರಲಿ ಒಳ್ಳೆಯ ಬುದ್ಧಿ (3)
5. ನಮ್ಮದೇ ದೇಶದ್ದು ಈ ಪ್ರಸಿದ್ಧ ನದಿ (3)
6. ಅಲ್ಲಿನ ಅರಸರ ಆದರ್ಶ, ಅಂತಹದು ಇನ್ನೊಂದಿಲ್ಲ (4)
8. ಆಭರಣ ಕೊಳ್ಳಹೋದರೆ ಸಾಲದ ಹೆದರಿಕೆ (4)
10. ತಂತ್ರಗಾರರ ದಾಳಿಯಿಂದ ಭಯ-ನಡುಕ (3)
11. ಗುಸುಗುಸು ನಡುನಡುವೆ ಅದೆಂಥ ಮಂದಹಾಸ? (4)
12. ಅಭ್ಯಾಸಕ್ಕೇ ತರದಂತೆ ಬರೀ ಅಡ್ಡಿ (4)
13. ಪರಮ ವೀರ ಹೌದು. ಆದರೆ ಪಂಡಿತನೇನಲ್ಲ (3)

### 23-1-14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಪ್ರಸಾಧನ; 3. 'ರಿವೇಹಾ' (ಹಾವೇರಿ ಹಿಂದುಮುಂದು); 4. ಕುಹಕ; 6. ರಕ್ಷಾಬಲ; 7. ಸಾಂತ್ವನ; 9. ಮೆಣಸು; 11. ರುಧಿರ; 13. ಗಹನ; 15. ಅನುಭವಿ; 17. 'ರಗಾಪ' (ಪಗಾರ ತಿರುಗಾ ಮುರುಗಾ); 18. ಭರಣಿ; 19. ರಥೋತ್ಸವ.

ಮೇಲಿಂದ ಕೆಳಕ್ಕೆ:

1. ಪ್ರಹಾರ; 2. ನಕುಲ; 3. ರಿಜುತ್ವ; 5. ಕಲ್ಯಾಣ; 7. ಸಾಂಬಾರು; 8. ನಶ್ವರ; 9. ಮೆದುಗ; 10. ಸುಮ್ಮಾನ; 12. ಧಿಕ್ಕಾರ; 14. ಹರಿಣಿ; 15. ಅಪರ; 16. ವಿಭವ.

## ಪ್ರಶ್ನಾಂಕಣ

# ದಂಡಿರುವೆ- ಏನು ವಿಶೇಷ?

ದಂಡಯಾತ್ರೆ ಕೈಗೊಂಡಿರುವ ಅಸಂಖ್ಯ ಸೈನಿಕರ ಬೃಹತ್ ಪಡೆಯಂತೆ ನಿತ್ಯ ಜೈತ್ರಯಾತ್ರೆ ನಡೆಸುವ ಇರುವೆಯೇ ದಂಡಿರುವೆ. ಇಡೀ ಕುಟುಂಬವೇ ಮುನ್ನಡೆಯುತ್ತ ಯಾವ ಶತ್ರುವಿಗೂ ಹೆದರದೆ, ಯಾವ ಅಡೆ-ತಡೆಗೂ ಹಿಮ್ಮೆಟ್ಟದೆ ಬಲಿಷ್ಠ ದಂಡಿನಂತೆ ಬಲಿಪ್ರಾಣಿಗಳ ಸೆದೆಬಡಿವ ಈ ಭಯಂಕರ ಇರುವೆಗೆ ಹಾಗಾಗಿಯೇ ದಂಡಿರುವೆ (ಆರ್ಮಿ ಆ್ಯಂಟ್) ಎಂಬ ಅನ್ವರ್ಥಕ ಅಭಿಧಾನ. ದಂಡಿರುವೆಗಳ ಇತರ ಕೆಲ ಅತಿ ವಿಸ್ಮಯದ ವೈಶಿಷ್ಟ್ಯಗಳು:

* ದಂಡಿರುವೆಗಳದು 'ಅಲೆಮಾರಿ' ಜೀವನ ಅವು ಎಲ್ಲೂ ಸ್ಥಿರವಾಗಿ ನೆಲಸುವುದಿಲ್ಲ, ಗೂಡು ಕಟ್ಟುವುದಿಲ್ಲ. ರಾಣಿ, ಮರಿಹುಳುಗಳು, ಮೊಟ್ಟೆಗಳು ಇತ್ಯಾದಿಗಳ ರಕ್ಷಣೆಗೆ ದಂಡಿರುವೆ ಕೆಲಸಗಾರರು ಲಕ್ಷಾಂತರ ಸಂಖ್ಯೆಯಲ್ಲಿ ತಾವೇ ಜೋಡಣೆಗೊಂಡು ಬಹು ಕೊಠಡಿಗಳ 'ಜೀವಂತ ಗೂಡು' ನಿರ್ಮಿಸುತ್ತವೆ. ಈ ಗೂಡಿನ ಜೊತೆಗೇ (ಚಿತ್-1) ಎಲ್ಲ ಸೈನಿಕರು, ಕೆಲಸಗಾರರು ಒಟ್ಟಾಗಿ ಸುಮಾರು ಏಳು ಲಕ್ಷ ಸಂಖ್ಯೆಯಲ್ಲಿ ಮುನ್ನಡೆಯುತ್ತವೆ.

* ದೃಢ ಶರೀರ, ಕುಡುಗೋಲಿನಂಥ ಹರಿತ ಕೋರೆದಾಡೆಗಳ ದಂಡಿರುವೆ ಪಡೆಯ ಮುಂಚೂಣಿಯ ಎರಡು-ಮೂರು ಲಕ್ಷ ಸೈನಿಕರು ತಮ್ಮ ಹಾದಿಗೆ




ಅಡ್ಡಬರುವ ಎಲ್ಲ ಪ್ರಾಣಿಗಳ ಮೇಲೂ ಎರಗುತ್ತವೆ ಛಿದ್ರಗೊಳಿಸುತ್ತವೆ: ಹಲ್ಲಿ, ಹಾವು, ಕಪ್ಪೆ ಮಿಡತೆ... ಕಟ್ಟಿ ಹಾಕಿದ ದನ-ಕರು ಕುದುರೆಗಳೂ ಅವಕ್ಕೆ ಬಲಿಯಾಗುತ್ತವೆ. ತಾವು ಕೊಲ್ಲುವ ಎಲ್ಲವನ್ನೂ ದಂಡಿರುವೆಗಳು ತಿನ್ನುವುದಿಲ್ಲ; ಜೇಳು, ಜೇಡ, ಜಿರಲೆ, ಮಿಡತೆಗಳಂಥವಷ್ಟೇ ಅವುಗಳ ಆಹಾರ.

* ತಮ್ಮ ಪಯಣದ ಹಾದಿಯಲ್ಲಿ ಎದುರಾಗುವ ಹಳ್ಳ, ಕೊಳ್ಳ, ಝರಿ ತೊರೆಗಳಿಗೂ ಈ ಇರುವೆಗಳು ಅಂಜುವುದಿಲ್ಲ. ಅಂಥ ಸಂದರ್ಭಗಳಲ್ಲಿ ದಂಡಿರುವೆ ಕೆಲಸಗಾರರು ಒಂದನ್ನೊಂದು ಕಚ್ಚಿ ಹಿಡಿದು ಒಂದು 'ಜೀವಂತ ಸೇತುವೆ'ಯನ್ನೇ ಕಟ್ಟುತ್ತವೆ (ಚಿತ್ರ-2). ಇಡೀ ದಂಡು ಈ ಸೇತುವೆಯ ಮೇಲೆ ಮುನ್ನಡೆಯುತ್ತದೆ.

* ದಂಡಿರುವೆಗಳು ಸಂಪೂರ್ಣ ಕುರುಡು. ಹಾಗಿದ್ದೂ ಹಗಲಿನ ವೇಳೆಯಲ್ಲಿ, ತೆರೆದ ನೆಲದಲ್ಲಿ ಇಂತಹ ಪರಮ ಧೈರ್ಯದ, ಅತ್ಯಂತ ಯಶದ, ಪರಿಪೂರ್ಣ ಹೊಂದಾಣಿಕೆಯ, ಸಾಂಘಿಕ ಜೀವನ- ಅದೇ ಅವುಗಳ ಪರಮ ವೈಶಿಷ್ಟ್ಯ.

ದಂಡಿರುವೆಗಳ ವಾಸ ಉಷ್ಣ ವಲಯಕ್ಕೆ ಸೀಮಿತ. ಮಧ್ಯ ಅಮೆರಿಕದಲ್ಲಿ 150 ಪ್ರಭೇದಗಳಲ್ಲಿರುವ ದಂಡಿರುವೆ ಏಷಿಯ ಆಫ್ರಿಕ ಆಸ್ಟ್ರೇಲಿಯಾಗಳಲ್ಲಿ ಮತ್ತೆ ಬೇರೆ 170 ಪ್ರಭೇದಗಳಲ್ಲಿ ಹರಡಿದೆ. ಈ ಪ್ರದೇಶಗಳಲ್ಲಿ 'ಡ್ರೈವರ್ ಆ್ಯಂಟ್' ಎಂಬ ಭಿನ್ನ ಅಭಿದಾನವನ್ನು ಪಡೆದಿದೆ.

■ ಎನ್. ವಾಸುದೇವ್